

ಪುರುಷೋತ್ತಮ ಬಿಳಿಮಲೆ

# ಭಾಷೆಯ ವಿಭಿನ್ನ ಕಾರ್ಯಗಳು



ಭಾಷೆಯು ಅನೇಕ ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತದೆಯಾದರೂ ಅದರ ಪ್ರಾಥಮಿಕ ಉದ್ದೇಶ ಸಂವಹನವೇ ಹೌದು. ಆದರೆ, ಸಂವಹನದ ರೀತಿ ನೀತಿಗಳು ಕಾಲ, ದೇಶ, ಸಮುದಾಯ ಮತ್ತು ವ್ಯಕ್ತಿಗಳಿಗೆ ಅನುಗುಣವಾಗಿ ಬದಲಾಗುತ್ತಲೇ ಇರುತ್ತವೆ. ಹೀಗಾಗಿ ನಾವು ಕಾವ್ಯ, ಪ್ರಭುತ್ವ, ಕಥನ, ಇತಿಹಾಸ, ಪುರಾಣ, ಧರ್ಮ, ಪಟ್ಟಾಂಗ ಮತ್ತಿತರ ಕಡೆಗಳಲ್ಲಿ ಬಳಕೆಯಾಗುವ ಭಾಷಾ ವಿಧಗಳನ್ನು ಹೆಚ್ಚು ಎಚ್ಚರದಿಂದ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ಇವೆಲ್ಲವುಗಳ ಗುಣ, ರಚನೆ ಮತ್ತು ಕಾರ್ಯಗಳು ಭಿನ್ನ ಭಿನ್ನವಾಗಿರುತ್ತವೆ.

ಸಾಮಾನ್ಯ ಭಾಷೆಯು ಸರಳವೂ ನೇರವೂ ಆಗಿದ್ದು, ವಸ್ತು, ಉದ್ದೇಶ ಮತ್ತು ಕ್ರಿಯಾಪದಗಳನ್ನು ಗೊಂದಲವಿಲ್ಲದೆ ಜೋಡಿಸುತ್ತದೆ. ಇಲ್ಲಿ ಯಾವುದೇ ಅಸ್ಪಷ್ಟತೆ ಉಂಟಾದರೆ, ಸಂವಹನ ಶಿಥಿಲವಾಗುತ್ತದೆ. ಉದಾಹರಣೆಗೆ: 'ನಾನು ನಾಳೆ ಧಾರವಾಡಕ್ಕೆ ಬರುತ್ತೇನೆ' ಎಂಬ ವಾಕ್ಯದಲ್ಲಿ 'ನಾನು' ಎಂಬ ಸರ್ವನಾಮವು 'ಬರುತ್ತೇನೆ' ಎಂಬ ಕ್ರಿಯಾಪದದೊಡನೆ ಅರ್ಥವತ್ತಾಗಿ ಹೆಣೆದುಕೊಂಡಿದೆ. ಇದರಲ್ಲಿರುವ ಸರ್ವನಾಮವನ್ನು 'ಅವನು' ಎಂದು ಮಾಡಿದರೆ, ಆಗ, ಕ್ರಿಯಾಪದವು 'ಬರುತ್ತಾನೆ' ಎಂದು ಬದಲಾಗುತ್ತದೆ. ಲಿಂಗ ಮತ್ತು ವಚನಗಳು ಸೇರಿದರೆ ಆಗಲೂ ಕ್ರಿಯಾಪದದಲ್ಲಿ ಕ್ರಮವಾಗಿ, ಬರುತ್ತಾಳೆ, ಬರುತ್ತದೆ, ಬರುತ್ತಾರೆ ಎಂಬ ಬದಲಾವಣೆಗಳು ಸಂಭವಿಸುತ್ತದೆ.

ಕಾವ್ಯದ ಭಾಷೆ ಇದಕ್ಕಿಂತ ಸ್ವಲ್ಪ ಭಿನ್ನವೂ ಹೊಸದೂ ಆಗಿರುತ್ತದೆ. ಕಾವ್ಯದಲ್ಲಿ ಸಾಮಾನ್ಯ ಭಾಷೆಯನ್ನು ಮುರಿದು ಮತ್ತೆ ಕಟ್ಟಲಾಗುತ್ತದೆ. ಉದಾಹರಣೆಗೆ ಮೇಲಿನ ವಾಕ್ಯವು ಕಾವ್ಯದಲ್ಲಿ ಪ್ರತ್ಯಕ್ಷವಾದಾಗ, ಅದು ಸಾಮಾನ್ಯವಾಗಿ 'ಬರುವೆನು ನಾನು ಧಾರವಾಡಕೆ' ಎಂದಾದರೂ ಬದಲಾಗಬೇಕಾಗುತ್ತದೆ. ಬೇಂದ್ರೆ ಕಾವ್ಯವನ್ನು ಓದಿದವರಿಗೆ ಈ ಕುರಿತು ಹೆಚ್ಚು ಹೇಳಬೇಕಾಗಿಲ್ಲ.